# ಬೇಸಿಗೆಯೆಂದರೆ



ಚಿತ್ರ: ಮಂಜುನಾಥ ಹುಲಕೊಪ್ಪದ

■ ಮಾಲತಿ ಪಟ್ಟಣಶೆಟ್ಟಿ

ಬೇಸಿಗೆಯೆಂದರೆ ನಾನು
ನೋಡುವೆ ಚಿಗುರೆಲೆ ಸಡಗರ ...
ಕೋಗಿಲೆ ಕೂಗಿನ ಮಧುರ,
ಪಡೆವೆ ಅಜ್ಜಿಯ ಪ್ರೀತಿಸಾಗರ,
ಸೇರುವೆ ಕ್ರಿಕೆಟ್ಟಿನ ಅಬ್ಬರ,
ಓ ಅದೆಂಥ ಸೊಗಸೋ ಸೊಗಸು...

ಬೇಸಿಗೆಯೆಂದರೆ ಅಪ್ಪನಿಗೆ
ನನ್ನ ಪರೀಕ್ಷೆಯದೇ ಚಿಂತೆ,
ನೂರು ಬೈಗುಳದ ಕಂತೆ,
ಹಗಲೂ ರಾತ್ರಿ ಓದಬೇಕಂತೆ
ಧಗೆಯೋ ಧಗೆಯವನಿಗೆ
ಧಗೆ ಧಗೆ ಧಗೆ...

ಬೇಸಿಗೆಯೆಂದರೆ ಅವ್ವನಿಗೆ
ಬಿಸಿಲಲ್ಲಿ ತಿರುಗಬಾರದು
ಮರಗಳನ್ನೇರಬಾರದು
ಉಡಾಳರು ಬೆನ್ನಿಗಿರಬಾರದು
ಚಿಂತೆ ಬಗೆ ಬಗೆಯವಳಿಗೆ
ಚಿಂತೆಯೋ ಚಿಂತೆ ! ಚಿಂತೆ...

ಬೇಸಿಗೆಯೆಂದರೆ ಗೆಳೆಯರಿಗೆ
ನೀರಿನಲ್ಲಿ ಮೀನಾಗುವುದು
ಗಗನದಲ್ಲಿ ಹಕ್ಕಿಯಾಗುವುದು
ಕಾಡಿನ ಹಣ್ಣು ಮುಕ್ಕುವುದು,
ಡೊಳ್ಳಿಗೆ ಕುಣಿತಾ ಕುಣಿಯುವುದು
ಸ್ವಚ್ಛಂದವೋ ಸ್ವಚ್ಛಂದಾ ! ಸ್ವಚ್ಛಂದಾ...

## ಒಗಟು ಬಿಡಿಸಿ

ಇದು ಹಾರುತ್ತೆ ಹಕ್ಕಿಯಲ್ಲ
ಇದು ಹಾಡುತ್ತೆ ಗಾಯಕ ಅಲ್ಲ
ಇದು ಚುಚ್ಚುತ್ತೆ ಸೂಜಿಯೂ ಅಲ್ಲ
ಹಾಗಾದರೆ ನಾನು ಯಾರು?

★★★

ನೀರನು ತರಲು ಹೋಗುವುದಿಲ್ಲ
ನೀರನು ಎಂದೂ ಮುಟ್ಟುವುದಿಲ್ಲ,
ಆದರೂ ನೀರನ್ನು ಕೊಡುವೆ ನಾನು
ಯಾರೆಂದು ನೀವು ಹೇಳಿ?

★★★

ಕರೆಯದೆ ಬರುವ ಅತಿಥಿಯು ನಾನು
ಹಾಡುತ ತಿರುಗುತಲಿರುವೆ,
ಸಿಹಿ ಭೋಜನ ಎಲ್ಲೇ ಇರಲಿ
ಕರೆಯದೆ ಅಲ್ಲಿಗೆ ಬರುವ ನಾನುಯಾರು?

ಉತ್ತರ: ಸೊಳ್ಳೆ, ತೆಂಗಿನ ಕಾಯಿ, ನೊಣ

# ಉಪ್ಪಿಟ್ಟುಪ್ಪಿಟ್ಟುಪ್ಪಿಟ್ಟು!



ಚಿತ್ರ: ವಿಜಯಕುಮಾರಿ

■ ರಾಜಶೇಖರ ಕುಕ್ಕುಂದಾ

ಬೆಳಗಾಗುತ್ತಲೆ
ಬೆಳಗಿನ ತಿಂಡಿಗೆ
ಉಪ್ಪಿಟ್ಟುಪ್ಪಿಟ್ಟುಪ್ಪಿಟ್ಟು!

ಅಂಕಲ್‌ಆಂಟಿಯ
ಸಂಜೆಯ ತಿಂಡಿಗೂ
ಉಪ್ಪಿಟ್ಟುಪ್ಪಿಟ್ಟುಪ್ಪಿಟ್ಟು!

ಬಾಪೂ, ನೆಹರೂ
ಹುಟ್ಟು ಹಬ್ಬಕ್ಕೂ
ಉಪ್ಪಿಟ್ಟುಪ್ಪಿಟ್ಟುಪ್ಪಿಟ್ಟು!

ಸ್ವಾತಂತ್ರ್ಯದ ದಿನ
ಆಚರಣೆಗೂ
ಉಪ್ಪಿಟ್ಟುಪ್ಪಿಟ್ಟುಪ್ಪಿಟ್ಟು!

ಅಕ್ಕನ ನೋಡಲು
ಬಂದವರಿಗೂ
ಉಪ್ಪಿಟ್ಟುಪ್ಪಿಟ್ಟುಪ್ಪಿಟ್ಟು!

ಸುಮ್ಮನೆ ಹೊರಡುವ
ಬೀದಿ ನಾಯಿಗೂ
ಉಪ್ಪಿಟ್ಟುಪ್ಪಿಟ್ಟುಪ್ಪಿಟ್ಟು!

ಉಪ್ಪಿಟ್ಟುಪ್ಪಿಟ್ಟುಪ್ಪಿಟ್ಟು;
ನನಗೋ ತಿಂದೂ ತಲೆಚಿಟ್ಟು!

ಉಪ್ಪಿಟ್ಟುಪ್ಪಿಟ್ಟುಪ್ಪಿಟ್ಟು;
ನೀ ಯಾಕಿಷ್ಟು ಫೆವರಿಟ್ಟು!?